ಅಭಿಪ್ರಾಯಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದಿದೆ. ನನ್ನ ಬರವಣಿಗೆಗೆ ವಿಮರ್ಶೆಗಳಿಂದ ಯಾವ ಬಗೆಯ ಸಹಾಯವಾಗಿಲ್ಲ. ಹಾಗೆ ಆಗುತ್ತದೆ ಎಂಬ ನಂಬಿಕೆಯೂ ನನಗಿಲ್ಲ. ಹೆಚ್ಚೆಂದರೆ ಒಂದು ಒಳ್ಳೆಯ ವಿಮರ್ಶೆ ಮುಂದಿನ ಬರವಣಿಗೆಗೆ ಪ್ರೇರಕ ಶಕ್ತಿ ಆಗಬಹುದು. ನನ್ನ ಬರವಣಿಗೆಯ ನಿಜವಾದ ವಿಮರ್ಶಕರು ನನ್ನ ಸಹೃದಯ ಓದುಗರು. ಒಂದು ಕೃತಿ ಹೇಗಿದೆ ಎನ್ನುವ ಕುರಿತು ಅವರು ಹೇಳಬಹುದಾದ ಪ್ರಾಮಾಣಿಕ ಅಭಿಪ್ರಾಯ ನನಗೆ ಮುಖ್ಯ ಅನಿಸುತ್ತದೆ.

**▸ ಎಲ್ಲೋ ಒಂದು ಕಡೆ ನಿಮ್ಮ ಸಹಜಾಭಿವ್ಯಕ್ತಿಯ ಸಾಹಿತ್ಯಕ್ಕೆ ಸಲ್ಲಬೇಕಾದ ಮನ್ನಣೆ ಸಿಗಲಿಲ್ಲ ಎಂದು ಓದುಗರಾದ ನಮಗೆ ಅನಿಸುತ್ತದೆ. ಈ ಕುರಿತು ನಿಮ್ಮ ಪ್ರತಿಕ್ರಿಯೆ ಏನು?**

ಮನ್ನಣೆ ಅನ್ನುವುದನ್ನು ನೀವು ಯಾವ ಅರ್ಥದಲ್ಲಿ ಹೇಳ್ತೀರೋ ನನಗೆ ಗೊತ್ತಾಗ್ತಿಲ್ಲ. ಸರ್ಕಾರದಿಂದ ಸಿಗುವ ಪ್ರಶಸ್ತಿ, ಸವಲತ್ತುಗಳು ಅಥವಾ ಬುದ್ಧಿಜೀವಿಗಳ ವಲಯದಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಸಂವಾದ ನಡೀತಿರಬೇಕು ಅನ್ನುವುದನ್ನು ಸಾಹಿತ್ಯಕ್ಕೆ ಸಿಗುವ ಮನ್ನಣೆ ಅಂತ ನೀವು ಭಾವಿಸೋದಾದ್ರೆ ಅಂತಾ ಪ್ರಚಾರ ನನಗೆ ಸಿಕ್ಕಿರಲಿಕ್ಕಿಲ್ಲ. ಆದರೆ ನಾನು ಬರೆದಿದ್ದನ್ನು ಓದುವ ಒಂದು ವರ್ಗ ಇರೋದು ನಂಗೆ ಗೊತ್ತಿದೆ. ಯಾರೋ ಫೋನ್ ಮಾಡ್ತಾರೆ, ಯಾರೋ ಕಾಗದ ಬರೀತಾರೆ, ಯಾರೋ ಮನೆಗೆ ಬರ್ತಾರೆ, ವಿಶ್ವಾಸ ತೋರಿಸ್ತಾರೆ. ಇದಕ್ಕಿಂತಾ ಹೆಚ್ಚಿನ ಮನ್ನಣೆ ಇನ್ನೇನಿದೆ? ಖಾಸಗಿ ಸಂಘ, ಸಂಸ್ಥೆಗಳಿಂದ ಸಾಕಷ್ಟು ಪ್ರಶಸ್ತಿ, ಬಹುಮಾನಗಳು ನನಗೆ ಬಂದಿದಾವೆ. 'ಮನ್ನಣೆಯ ದಾಹವದು ಎಲ್ಲಕುಂ ಮಿಗಿಲು' ಎಂದು ಡಿ.ವಿ.ಜಿ. ಹೇಳಿದ್ದರೂ ಈ ವಿಷಯದಲ್ಲಿ ನನಗೆ ತೃಪ್ತಿ ಇದೆ.

**▸ ನೀವು ಬಾಳಿನಲ್ಲಿ ಯಾವುದಕ್ಕೆ ಕೃತಜ್ಞರಾಗಿದ್ದೀರಿ?**

ಯಾವುದಕ್ಕೆ ಅಥವಾ ಯಾರ್‍ಯಾರಿಗೆ ಅನ್ನುವ ಪಟ್ಟಿ ಮಾಡಲು ಹೋದರೆ ಮಾರುದ್ದ ಆದೀತು. ಬಾಳು ಅನ್ನುವುದು ಋಣದ ರತ್ನಗಳ ಗಣಿ ಎಂದು ಕವಿವರ್ಯರು ಹೇಳಿದ್ದಾರೆ. ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ ನನ್ನ ಕೈ ಹಿಡಿದು ಇದುವರೆಗೆ ನಡೆಸಿದ ಬರವಣಿಗೆಯ ಶಕ್ತಿ ನನಗೆ ಕೊಡಮಾಡಿದ ಸಮಾಧಾನದ, ಸಾರ್ಥಕತೆಯ ಭಾವನೆಗೆ, ನನ್ನ ಬರಹಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದ ಪತ್ರಿಕಾ ಮಾಧ್ಯಮಕ್ಕೆ, ನಿರಂತರ ನನ್ನನ್ನು ಪ್ರೋತ್ಸಾಹಿಸುತ್ತಿರುವ ಪಾಂಡುರಂಗ ಉಡುಪರಿಗೆ, ನನ್ನ ಸಮಸ್ತ ಓದುಗರ ಬಳಗಕ್ಕೆ...

**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನಲ್ಲಿ ನೆಲೆಸಿರುವ ಗೃಹಿಣಿ. ಅವರ ಎರಡು ಕಾದಂಬರಿಗಳು, ಎರಡು ಕಥಾಸಂಕಲನಗಳು, ಎರಡು ಕವನ ಸಂಕಲನಗಳು ಪ್ರಕಟವಾಗಿದೆ. 'ಮಯೂರ'ವೂ ಸೇರಿದಂತೆ ಕೆಲವು ಪತ್ರಿಕೆಗಳಲ್ಲಿ ಕತೆಗಳನ್ನು ಪ್ರಕಟಿಸಿದ್ದಾರೆ. 'ಪಯಣರಾಗ' ಎಂಬ ಭಾವಗೀತೆಗಳ ಧ್ವನಿ ಸುರಳಿಯನ್ನು ಹೊರತಂದಿದ್ದು, 'ಕದಳಿ ಕಲ್ಯಾಣ' ಎಂಬ ನಾಟಕವನ್ನೂ ಅವರು ಬರೆದಿದ್ದಾರೆ.